**ಸಿಸಿ ನಂಃ 1330/2023**

**ಪಿ .ಡಬ್ಲು–1**

ಸಾಕ್ಷಿಯನ್ನು ದಿನಾಂಕಃ 02.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ಅರೋಪಿ ಯ ಪರ ಶ್ರೀ. ಪಿ ಎನ್ ವಕೀಲರಿಂದ**

ನಾನು ಹಿಂದಿನ ಪಾಟೀ ಸವಾಲಿನಲ್ಲಿ 28.11.2022 ರಂದು ಅರೋಪಿಯು ಹಣ ಕೇಳಿದ್ದು ಅದೇ ದಿನವೇ ಹಣ ನೀಡಿರುವುದಾಗಿ ಹೇಳಿದ್ದು ಅದು ಸರಿ ಇದೆಯಾ ಎಂದರೆ ನಾನು ಒಂದೇ ದಿನ ಹಣ ನೀಡಿಲ್ಲ ಅರೋಪಿಯ ಅಣ್ಣ ಬಂದಾಗ ಹಣ ನೀಡಿರುತ್ತೇನೆ. ಹಣವನ್ನು ನೀಡುವಾಗ ಷರತ್ತುಗಳು ಮಾಡಿರುತ್ತೀರಾ ಎಂದರೆ 3 ತಿಂಗಳ ಒಳಗಾಗಿ ಹಣವನ್ನು ಒಂದೇ ಬಾರಿ ವಾಪಸ್ಸು ನೀಡುವುದಾಗಿ ಹೇಳಿದ್ದರು. ನೀವು ಅದಾಯ ತೆರಿಗೆ ಪಾವತಿದಾರರಾ ಎಂದರೆ ಪಾವತಿ ಮಾಡುತ್ತೇನೆ ಅದರೆ ದಾಖಲಾತಿಗಳನ್ನು ನೀಡಿರುವುದಿಲ್ಲ. ಅರೋಪಿಯು 1 ಲಕ್ಷ 70 ಸಾವಿರಕ್ಕೆ ಔಷದಿ ಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ಸದರಿ ಖರೀದಿಯ ಹಣಕ್ಕೆ ಬಡ್ಡಿ ಸೇರಿಸಿ 2 ಲಕ್ಷ 90 ಸಾವಿರ ಕೇಳಿರುತ್ತೇನೆ ಎಂದರೆ ಸರಿಯಲ್ಲ.

ಅರೋಪಿಯ ಹೆಂಡತಿ ನನಗೆ ಗೊತ್ತು. ಅರೋಪಿಯ ಹೆಂಡತಿಯ ಒಡವೆಗಳನ್ನು ಸೀಗೆಹಳ್ಳಿ ಬ್ಯಾಂಕ್ ಅಪ್ ಬರೋಡಾದಲ್ಲಿ ಅಡಮಾನ ಮಾಡಿ ನಿಮಗೆ 2 ಲಕ್ಷ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅರೋಪಿಯ ಹೆಂಡತಿ ಹಾಗೂ ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಅಗಿರುವುದಿಲ್ಲ. ಸದರಿ 2 ಲಕ್ಷ ಹಣವನ್ನು ಪಂಚಾಯಿತಿದಾರರ ಸಮಕ್ಷಮ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ವಿರುದ್ದ ಪೋಲಿಸ್ ಪ್ರಕರಣ ಇರುತ್ತದೆ ಎಂದರೆ ಸರಿ ಅದು ಮುಗಿದಿರುವುದಾಗಿ ನುಡಿಯುತ್ತಾರೆ. ಪ್ರಕರಣದ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ನಿಮ್ಮ ಅಂಗಡಿಯಲ್ಲಿ ನಕಲು ಔಷದಿ ಹಾಗೂ ನಕಲು ಗೊಬ್ಬರವನ್ನು ಮಾರಾಟ ಮಾಡುತ್ತಿರುವುದಾಗಿ ಸದರಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಕಲು ಗೊಬ್ಬರ ಹಾಗೂ ಔಷದಿಗಳನ್ನು ನೀಡಿರುವ ಕಾರಣ ಅರೋಪಿಗೆ ಬೆಳೆ ನಷ್ಟ ವಾಗಿರುತ್ತದೆ ಎಂದರೆ ಸರಿಯಲ್ಲ.

ಅರೋಪಿಗೆ ಸೇರಿದ ಪೂರ್ತಿ ಚೆಕ್ ಪುಸ್ತಕ ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಅರೋಪಿ ಗೊಬ್ಬರ ಖರೀದಿ ಮಾಡುವ ಸಮಯದಲ್ಲಿ ಚೆಕ್ ಪುಸ್ತಕವನ್ನು ಪಡೆದುಕೊಂಡು ಹೆಚ್ಚಿನ ಬಡ್ಡಿಯ ಬೇಡಿಕೆ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅರೋಪಿಗೆ ಸೇರಿದ ಚೆಕ್ ಗೆ ನಾನೇ ಸಹಿ ಮಾಡಿಕೊಂಡು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದರೆ ಸ ರಿಯಲ್ಲ. ನಿಪಿ 1 ರಲ್ಲಿರುವ ಅರೋಪಿಯ ಸಹಿಗೂ ಮತ್ತು ವಕಾಲತ್ತಿನಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಕೃಷ್ಣಮೂರ್ತಿ ಎನ್ನುವ ಹೆಸರನ್ನು ನಾನೇ ಬರೆದುಕೊಂಡಿರುತ್ತೇನೆ. ನಿಪಿ 1 ರಲ್ಲಿ ಬರೆದಿರುವ ಸಂಖ್ಯೆ ಹಾಗೂ ಅಕ್ಷರಗಳಲ್ಲಿ 5 ಲಕ್ಷ ಬೇರೆ ಬೇರೆ ಶಾಯಿ ಎಂದರೆ ಸರಿ . ನಿಪಿ 1 ರಲ್ಲಿರುವ ಅರೋಪಿಯ ಸಹಿ ಹಾಗೂ

ಇತರ ಬರವಣಿಗೆಗಳ ಶಾಯಿಗಳು ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಸಹಿಗೂ ಅರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅರೋಪಿಗೆ ಸೇರಿದ ಚೆಕ್ ನ್ನು ನನಗೆ ಇಷ್ಟಬಂದ ಹಣವನ್ನು ತುಂಬಿಕೊಂಡುಸುಳ್ಳು ಪ್ರಕರಣ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅರೋಪಿಯು ಕೂಲಿ ಕೆಲಸ ಮಾಡುತ್ತಿದ್ದು , 15 ಲಕ್ಷ ಹಣವನ್ನು ಪಡೆದಕೊಳ್ಳುವ ಅವಶ್ಯಕತೆ ಇರುವುದಿಲ್ಲ ಹಾಗೂ ನಾನು ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಸಹಿಗೂ ಹಾಗೂ ನಿಪಿ 5 ರಲ್ಲಿರುವ ಸಹಿಗೂ ಸಂಬಂದಇಲ್ಲ ಎಂದರೆ ಸರಿಯಲ್ಲ.

-

**ಮರು ವಿಚಾರಣೆಃ– ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/–**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**